ಪರಿಸ್ಥಿತಿ ಇಲ್ಲ. ಹೀಗಾಗಿ ನಾನು ಬಂದ ಮೇಲೆ ವಿಕ್ಟೋರಿಯಾ ಆಸ್ಪತ್ರೆಗೆ 20 ಬೆಡ್‌ಗಳನ್ನು ಬೌರಿಂಗ್ ಆಸ್ಪತ್ರೆಗಳಿಗೆ 20 ಬೆಡ್‌ಗಳನ್ನು ICU ಯೂನಿಟ್ ಗಳನ್ನಾಗಿಸಬೇಕೆಂದು ಈಗಾಗಲೇ ನಾನು ವ್ಯವಸ್ಥೆ ಮಾಡಿದ್ದು, ಅದಕ್ಕೆ 14 ಕೋಟಿ ರೂಪಾಯಿಗಳನ್ನು ಕೋರಿದ್ದೇನೆ. 14 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ರಾಜ್ಯ ಸರ್ಕಾರ ಒಪ್ಪಿದೆ. ತಾವು ಈ ಬಜೆಟ್‌ನ್ನು ಮಾನ್ಯತೆ ಮಾಡಿದ ಕೂಡಲೇ ಆದಷ್ಟು ಬೇಗ ಈ ಎರಡು ಆಸ್ಪತ್ರೆಗಳಿಗೆ ICU ಯೂನಿಟ್‌ಗಳನ್ನು ಇಡುವಂಥ ವ್ಯವಸ್ಥೆಯಾಗುತ್ತದೆ. ಮತ್ತು ಶೇಕಡ 50 ರಷ್ಟು ಔಷಧಿಗಳನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಆಸ್ಪತ್ರೆಗಳಿಗೆ ಕೊಟ್ಟು ಯಾವುದೇ ಸಂದರ್ಭದಲ್ಲಿ ರೋಗಿಗಳು ಹೋದರೆ ಔಷಧಿ ಇಲ್ಲ ಎನ್ನುವ ಪರಿಸ್ಥಿತಿ ಬರಬಾರದು ಎನ್ನುವ ಮಾತನ್ನು ಹೇಳುತ್ತಾ ತಾವೇನು ಬೌರಿಂಗ್ ಆಸ್ಪತ್ರೆಗೆ ನನ್ನ ಜೊತೆಯಲ್ಲಿ ಬರಬೇಕೆಂದು ಅಪೇಕ್ಷೆ ಪಟ್ಟಿದ್ದೀರಿ, ಖಂಡಿತವಾಗಿ ಇನ್ನು ಎರಡು ಮೂರು ದಿವಸದೊಳಗಾಗಿ ನಾನು ನಿಮ್ಮನ್ನು ಬೌರಿಂಗ್ ಆಸ್ತತ್ರೆಗೆ ಕರೆದುಕೊಂಡು ಹೋಗಿ ಎಲ್ಲಾ ವ್ಯವಸ್ಥೆಯನ್ನು ನೋಡಿಕೊಂಡು ಬರುವುದಕ್ಕೆ ವ್ಯವಸ್ಥಿತವಾಗಿ ತಮಗೆ ಮಾಡುತ್ತೇನೆಂದು ಹೇಳುತ್ತಾ ತಾವು ಕೊಡತಕ್ಕಂಥ ಎಲ್ಲಾ ಸಲಹೆಗಳನ್ನು ಅಂಗೀಕರಿಸಿ ಕೆಲಸ ಮಾಡುವಂಥ ಹಾದಿಯಲ್ಲಿ ಹೋಗುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಆರ್. ರೋಷನ್ ಬೇಗ್: ಧನ್ಯವಾದಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎನ್. ವೈ. ಗೋಪಾಲಕೃಷ್ಣ: ನನ್ನ ಕೊನೆಯ ಪ್ರಶ್ನೆ ಬಿಟ್ಟು ಬಿಟ್ಟಿರಿ

ಅಧ್ಯಕ್ಷರು: ಟೈಂ ಆಯಿತು. ಒನ್ ಅವರ್ ಆಯಿತು, ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ.

ಶ್ರೀ ಎನ್. ವೈ. ಗೋಪಾಲಕೃಷ್ಣ: ನಾನು ನಿಂತಿರುವುದೇ ಬಹಳ ಅಪರೂಪಕ್ಕೆ. ನಾನು ಯಾವತ್ತು ಏನು ಕೇಳುವುದಕ್ಕೆ ಹೋಗಿಲ್ಲ.

ಅಧ್ಯಕ್ಷರು: ಒಂದೊಂದು ಸಲ ಏನಾಗುತ್ತದೆ, ಕಂಟ್ರೋಲ್ ಮಾಡದಿದ್ದರೆ ಕಷ್ಟ, ಈಗ ಬೇಡ ಮುಂದಿನ ಸಾರಿ ತಮಗೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 24–07–08 ರಂದು 04ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 29 ಪ್ರಶ್ನೆಗಳ ಪೈಕಿ 25 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಪ್ರಕಟಣೆ

ಅಧ್ಯಕ್ಷರು: (ಪ್ರತಿ ಲಗತ್ತಿಸಿದೆ)

ಗಮನ ಸೆಳೆಯುವ ಸೂಚನೆಗಳು

ವಿಷಯ: ಚಿಂತಾಮಣಿ ನಗರದಲ್ಲಿ ಹಿಂದುಳಿದ ವರ್ಗಗಳ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಿದ್ಯಾರ್ಥಿನಿಲಯಗಳು ಇಲ್ಲದಿರುವುದರಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವ ಬಗ್ಗೆ:–

ಡಾ॥ ಎಂ. ಸಿ. ಸುಧಾಕರ್ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ನಗರದಲ್ಲಿ ಹಿಂದುಳಿದ ವರ್ಗಗಳ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಿದ್ಯಾರ್ಥಿನಿಲಯಗಳು ಇಲ್ಲದಿರುವುದರಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು): (ಉತ್ತರದ ಪ್ರತಿ ಲಗತ್ತಿಸಿದೆ)

ಡಾ॥ ಸುಧಾಕರ ಎಂ. ಸಿ. ವಿಧಾನಸಭಾ ಸದಸ್ಯರು ಇವರು ನಿಯಮ 73ರಡಿಯಲ್ಲಿ ಎತ್ತಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಸೂಚನೆ:

ಚಿಂತಾಮಣಿ ನಗರದಲ್ಲಿ ಮಹಿಳೆಯರ ಕಾಲೇಜುಗಳು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಗುಳಿದ್ದು, ಹಿಂದುಳಿದ ವರ್ಗಗಳ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಿದ್ಯಾರ್ಥಿನಿಲಯಗಳು ಇಲ್ಲದೆ ಇರುವುದರಿಂದ ವಿದ್ಯಾರ್ಥಿನಿಯರಿಗೆ ಆಗುತ್ತಿರುವ ತೊಂದರೆ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 1266 ಮೆಟ್ರಿಕ್–

ಪೂರ್ವ ಹಾಗೂ 300 ಮೆಟ್ರಿಕ್–ನಂತರದ ಬಾಲಕ–ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಕ್ರಮವಾಗಿ 70648 ಹಾಗೂ 23685 ಹೀಗೆ ಒಟ್ಟು 94333 ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ.

300 ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳಲ್ಲಿ 160 ಬಾಲಕರ ಹಾಗೂ 140 ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು, ಅವುಗಳು ಕ್ರಮವಾಗಿ 13690 ಬಾಲಕರು ಹಾಗೂ 9995 ಬಾಲಕಿಯರು ಹೀಗೆ ಒಟ್ಟು 23685 ಪ್ರಯೋಜನ ಪಡೆಯುತ್ತಿದ್ದಾರೆ.

ಚಿಂತಾಮಣಿ ಟೌನ್‌ನಲ್ಲಿ ಮಹಿಳೆಯರ ಸಾಕಷ್ಟು ಶಿಕ್ಷಣ ಸಂಸ್ಥೆಗಳಿದ್ದು, ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಇಲ್ಲದೆ ವಿದ್ಯಾರ್ಥಿನಿಯರುಗಳಿಗೆ ತೊಂದರೆ ಆಗಿರುವುದು ಗಮನಕ್ಕೆ ಬಂದಿರುತ್ತದೆ.

ರಾಜ್ಯದಲ್ಲಿ ಹೊಸದಾಗಿ 121 ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯಗಳು ಮತ್ತು 81 ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 202 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಬೇಡಿಕೆ ಇರುತ್ತದೆ. ಇದರಲ್ಲಿ ಚಿಂತಾಮಣಿ ನಗರದಲ್ಲಿ ಒಂದು ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಪ್ರಸ್ತಾವನೆಯೂ ಒಳಗೊಂಡಿರುತ್ತದೆ. ಅದೇ ರೀತಿ ರಾಜ್ಯದಲ್ಲಿ 75 ತಾಲ್ಲೂಕು ಕೇಂದ್ರಗಳಲ್ಲಿ ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಇರುವುದಿಲ್ಲ ಹಾಗೂ 82 ತಾಲ್ಲೂಕು ಕೇಂದ್ರಗಳಲ್ಲಿ ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

2008–09ನೇ ಸಾಲಿನಲ್ಲಿ ಹೊಸ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲು ರೂ. 10.00 ಕೋಟಿಗಳನ್ನು ಒದಗಿಸಲಾಗಿದ್ದು, ಚಿಂತಾಮಣಿ ಟೌನ್‌ನಲ್ಲಿ ಒಂದು ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಮಂಜೂರಾತಿ ಬಗ್ಗೆ ಪರಿಶೀಲಿಸಲಾಗುವುದು.

ಡಾ॥ ಎಂ. ಸಿ. ಸುಧಾಕರ್: ಮಾನ್ಯ ಅಧ್ಯಕ್ಷರೆ, ಪರಿಶೀಲಿಸಲಾಗುವುದೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲಿಸಲಾಗುತ್ತದೆ ಎಂದು ಸುಮಾರು ವರ್ಷಗಳಿಂದ ಹೇಳಲಾಗುತ್ತಿದೆ. ಸುಮಾರು 50 ವರ್ಷಗಳಿಂದ ಅಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ನಡೆಯುತ್ತಿದೆ. ಇತ್ತೀಚೆಗೆ ಅಲ್ಲಿ ಹಲವಾರು ಪ್ರೊಫೆಷನಲ್ ಕೋರ್ಸ್‌ಗಳನ್ನು ಪ್ರಾರಂಭಮಾಡಲಾಗಿದೆ. ಇವತ್ತಿನ ದಿವಸ ಹೆಚ್ಚಾಗಿ ಬಾಲಕಿಯರು ವಿದ್ಯಾಭ್ಯಾಸ ಮಾಡಿ ಉನ್ನತ ಮಟ್ಟದ ಶಿಕ್ಷಣ ಪಡೆಯಬೇಕಾಗಿರತಕ್ಕಂಥ ಕಾಲವಾಗಿದೆ. ಅಲ್ಲಿ ವಿದ್ಯಾರ್ಥಿನಿಲಯ

ಇಲ್ಲದೆ ಇರುವುದರಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬ ವಿಚಾರವನ್ನು ವಿದ್ಯಾರ್ಥಿಗಳ ಪೋಷಕರು ಸುಮಾರು 2 ವರ್ಷಗಳಿಂದ ನನ್ನ ಗಮನಕ್ಕೆ ತರುತ್ತಿದ್ದಾರೆ. ಇದರ ಬಗ್ಗೆ ಹಿಂದಿನ ಸಚಿವರ ಗಮನಕ್ಕೆ ಸತತವಾಗಿ ತಂದು ಹಲವಾರು ಬಾರಿ ಪ್ರಯತ್ನ ಕೂಡ ಮಾಡಿದ್ದೇನೆ. ಆದರೆ, ಈ ವರ್ಷ ಬಹಳಷ್ಟು ಬೇಡಿಕೆ ಇರುವುದರಿಂದ ಅಲ್ಲಿನ ಸಮಸ್ಯೆ ಬಗ್ಗೆ ಮತ್ತು ವಿದ್ಯಾರ್ಥಿಗಳ ಪೋಷಕರ ಒಂದು ಕೂಗಿಗೆ ಖಂಡಿತ ಉತ್ತರ ಕೊಡತಕ್ಕಂಥ ಪರಿಸ್ಥಿಯಲ್ಲಿ ನಾವು ಇಲ್ಲ. ಆದ್ದರಿಂದ, ಈ ಒಂದು ಶೈಕ್ಷಣಿಕ ವರ್ಷದಲ್ಲಿಯೇ ಇದನ್ನು ಪ್ರಾರಂಭ ಮಾಡಲಾಗುತ್ತದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ಕೊಟ್ಟರೆ ಮಾತ್ರ ನನ್ನ ಕ್ಷೇತ್ರದಲ್ಲಿರತಕ್ಕಂಥ ಬಡ ವಿದ್ಯಾರ್ಥಿಗಳಿಗೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ಸುಧಾಕರ್: ಮಾನ್ಯ ಆಧ್ಯಕ್ಷರೆ, 2008–09ನೇ ಸಾಲಿನಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಡಾ॥ ಎಂ. ಸಿ. ಸುಧಾಕರ್: ಮಾನ್ಯ ಆಧ್ಯಕ್ಷರೆ, ಮತ್ತೆ ಪರಿಶೀಲಿಸುತ್ತೇನೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದಕ್ಕೆ ಅರ್ಥವೇನು ತಾವೇ ಹೇಳಿ? ಅಲ್ಲಿ ಸಮಸ್ಯೆ ಇದೆ ಮತ್ತು ಅಲ್ಲಿ ಸುಮಾರು 3 ಸಾವಿರಕ್ಕಿಂಥ ಹೆಚ್ಚು ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುವುದಕ್ಕೆ ಅಲ್ಲಿಗೆ ಬರುತ್ತಿದ್ದಾರೆ ಎಂಬ ವಿಷಯವನ್ನು ಮಾನ್ಯ ಸಚಿವರೇ ಹೇಳಿದ್ದಾರೆ. ಮತ್ತೆ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆಂದು ಸರ್ಕಾರ ಹೇಳುತ್ತಾ ಹೋದರೆ ಅದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎನ್. ಸಂಪಂಗಿ: ಮಾನ್ಯ ಆಧ್ಯಕ್ಷರೆ, ತತ್‌ಕ್ಷಣ ಅಲ್ಲೊಂದು ಬಾಡಿಗೆಗೆ ಕಟ್ಟಡ ತೆಗೆದುಕೊಂಡು ಈ ಸಾಲಿನಲ್ಲಿಯೇ ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ, ಅವೆಲ್ಲವೂ ಗಡಿನಾಡ ಪ್ರದೇಶಗಳಾಗಿವೆ. ಈಗ ನೀವೇನಾದರು ಮಾಡದಿದ್ದರೆ ಅಲ್ಲಿನ ಮಕ್ಕಳಿಗೆ ಖಂಡಿತ ತೊಂದರೆಯಾಗುತ್ತದೆ. ಆದ್ದರಿಂದ, ನಿರ್ದಿಷ್ಟವಾಗಿ ಈ ವರ್ಷವೇ ಪ್ರಾರಂಭ ಮಾಡುತ್ತೇವೆಂಬ ಭರವಸೆಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಡಾ॥ ಎಂ. ಸಿ. ಸುಧಾಕರ್: ಇದಕ್ಕೋಸ್ಕರ ಸ್ಥಳವನ್ನು ಸಹ ಹುಡುಕಿಟ್ಟಿದ್ದೇವೆ. ಖಾಸಗಿ ಜಾಗದಲ್ಲಿ ತಾವು ದಯವಿಟ್ಟು ಪ್ರಾರಂಭ ಮಾಡಿ.

ಅಧ್ಯಕ್ಷರು: ಆದ್ಯತೆ ಮೇಲೆ ಮಾಡಲಾಗುತ್ತದೆಂದು ಹೇಳಿ

ಶ್ರೀ ಡಿ. ಸುಧಾಕರ್: ನಾನು ಈಗಾಗಲೇ ಹೇಳಿದ ಹಾಗೆ ಆದ್ಯತೆ ಮೇಲೆ 2008–09ನೇ ಸಾಲಿನಲ್ಲಿ ಮಾಡಲಾಗುತ್ತದೆ.

ಶ್ರೀ ಬಿ. ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಪರವಾಗಿ ತಾವೇ ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೀರಿ.

ಗಮನ ಸೆಳೆಯುವ ಸೂಚನೆ

ವಿಷಯ: ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ ಇದರ ಸುಧಾರಣೆಯನ್ನು ಮಾಡುವ ಸಲುವಾಗಿ ಸರ್ಕಾರದಿಂದ ರೂ. 100.00 ಕೋಟಿಗಳ ವಿಶೇಷ ಅನುದಾನವನ್ನು ನೀಡುವ ಬಗ್ಗೆ:–

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಅಧ್ಯಕ್ಷರೇ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ ಇದರ ಸುಧಾರಣೆಯನ್ನು ಮಾಡುವ ಸಲುವಾಗಿ ಸರ್ಕಾರದಿಂದ ರೂ. 100.00 ಕೋಟಿಗಳ ವಿಶೇಷ ಅನುದಾನವನ್ನು ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ: ಮಾನ್ಯ ಅಧ್ಯಕ್ಷರೆ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ವಿಧಾನಸಭಾ ಸದಸ್ಯರು ಇವರು ನಿಯಮ 73ರ ಅಡಿಯಲ್ಲಿ ಮಾಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 18ಕ್ಕೆ ಹೇಳಿಕೆ.

***

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾ ಇದರ ಸುಧಾರಣೆಯನ್ನು ಮಾಡುವ ಸಲುವಾಗಿ ಸರ್ಕಾರದಿಂದ ರೂ. 100.00 ಕೋಟಿಗಳ ವಿಶೇಷ ಅನುದಾನವನ್ನು ನೀಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುವ ಸೂಚನೆ:–

***

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೇ, ಗುಲ್ಬರ್ಗಾಕ್ಕೆ 2007–08ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ರೂ. 30.00 ಕೋಟಿ ಅನುದಾನ

ಒದಗಿಸಿದ್ದು ಅದನ್ನು ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ. ಅಲ್ಲದೆ ಸದರಿ ಸಂಸ್ಥೆಗೆ ಹೊಸ ಬಸ್‌ಗಳ ಖರೀದಿಗಾಗಿ ವಾಣಿಜ್ಯ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ರೂ. 34.00 ಕೋಟಿ ಸಾಲ ಪಡೆಯುವುದಕ್ಕೆ 2007–08ರಲ್ಲಿ ಅನುಮತಿ ನೀಡಲಾಗಿರುತ್ತದೆ.

2008–09ನೇ ಸಾಲಿನಲ್ಲಿಯೂ ಆಯವ್ಯಯದಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 30.00 ಕೋಟಿ ಅನುದಾನವನ್ನು ಲೆಕ್ಕ ಶೀರ್ಷಿಕೆ 5055–00–190–4–00 ಇದರಡಿಯಲ್ಲಿ ಒದಗಿಸಿದೆ. ಅಲ್ಲದೆ ಈ ಸಂಸ್ಥೆಗೆ ಆಯವ್ಯಯದಲ್ಲಿ ಐ.ಇ.ಬಿ.ಆರ್.ನಡಿ (Internal Extra Budgetary Resources) ಮೂಲಭೂತ ಸೌಕರ್ಯಗಳಿಗಾಗಿ ಒಟ್ಟು ರೂ. 100.00 ಕೋಟಿಗಳ ಅವಕಾಶ ಕಲ್ಪಿಸಿದೆ.

ಬಜೆಟ್ ಆದ ಕೂಡಲೇ ನಿಮ್ಮ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರತಕ್ಕಂಥದ್ದು ನಮಗೆಲ್ಲಾ ಸಂತೋಷವಾಗಿದೆ. 100 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿರುವುದರಿಂದ ಅವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: ರಾಜ್ಯದ ಹೇಮಾವತಿ ಯೋಜನೆ ಕೆಳಗಡೆ ಬರುವ ಶ್ರೀರಾಮದೇವರ ಉತ್ತರ–ದಕ್ಷಿಣ ನಾಲೆಗಳಿಗೆ ನೀರು ಹರಿಸದಿರುವ ಹಾಗೂ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕರೆಯದೇ ಉದ್ಭವಿಸಿರುವ ಸಮಸ್ಯೆಯ ಬಗ್ಗೆ:–

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ರಾಜ್ಯದ ಹೇಮಾವತಿ ಯೋಜನೆ ಕೆಳಗಡೆ ಬರುವ ಶ್ರೀರಾಮದೇವರ ಉತ್ತರ–ದಕ್ಷಿಣ ನಾಲೆಗಳಿಗೆ ನೀರು ಹರಿಸದಿರುವ ಹಾಗೂ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕರೆಯದೇ ಉದ್ಭವಿಸಿರುವ ಸಮಸ್ಯೆಯ ಬಗ್ಗೆ ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೇ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)